ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2020–21ನೇ ಸಾಲಿನಲ್ಲಿ ಬಿ.ಬಿ.ಎಂ.ಪಿ ವ್ಯಾಪ್ತಿಯ 110 ಹಳ್ಳಿಗಳ ರಸ್ತೆ ದುರಸ್ಥಿ ಮತ್ತು ಅಭಿವೃದ್ಧಿ ಯೋಜನೆಯಲ್ಲಿ ಅನುಮೋದನೆಗೊಂಡಿರುವ "Restoration and Improvements of Balance roads of Chikkabettahalli, Doddabettahalli village, Adityanagara Phase-01 and surrounding areas in ward no -03 of Yelahanka New town Sub division PACKAGE NO-05" (Sl No.240 ಮತ್ತು 244) ಪ್ಯಾಕೇಜಿನ ಅಂದಾಜು ಮೊತ್ತ ರೂ.10.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್‌ಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ನಅಇ 06 ಎಂಎನ್‌ವೈ 2021, ದಿನಾಂಕ: 29–04–2021.
2. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ:ಮು.ಆ/ಪಿ.ಆರ್/ಪಿಎಸ್‌ಆರ್(ಜಿ))/3090/2021–22, ದಿನಾಂಕ:10–11–2021.
3. ದಿನಾಂಕ: 26–11–2021 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿ.

* * * * *

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 29–04–2021ರ ಆದೇಶದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2020–21ನೇ ಸಾಲಿನ ರಾಜ್ಯ ಆಯವ್ಯಯದ ಕಂಡಿಕೆ: 205 ರಲ್ಲಿ ಘೋಷಿಸಿರುವಂತೆ ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳ ರಸ್ತೆ ದುರಸ್ಥಿ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಒಟ್ಟು ರೂ.1000.00 ಕೋಟಿಗಳ ಅಂದಾಜು ಮೊತ್ತದ ಕ್ರಿಯಾಯೋಜನೆಗೆ ಅನುಮೋದನೆ ನೀಡಿ ಆದೇಶಿಸಿದ್ದು, ಸದರಿ ಆದೇಶದ ಕ್ರಮ ಸಂಖ್ಯೆ: ಕ್ರಮ ಸಂಖ್ಯೆ: 240 ಮತ್ತು 244 ರಲ್ಲಿನ 02 ಕಾಮಗಾರಿಗಳಿಗೆ ಒಟ್ಟು ರೂ.10.00 ಕೋಟಿಗಳ ಅನುದಾನ ನಿಗಧಿಪಡಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ: 10–11–2021 ರ ಪತ್ರದಲ್ಲಿ, ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು, ಸರ್ಕಾರವು "2020–21ನೇ ಸಾಲಿನಲ್ಲಿ ಬಿ.ಬಿ.ಎಂ.ಪಿ ವ್ಯಾಪ್ತಿಯ 110 ಹಳ್ಳಿಗಳ ರಸ್ತೆ ದುರಸ್ಥಿ ಮತ್ತು ಅಭಿವೃದ್ಧಿ ಯೋಜನೆ" ಸರ್ಕಾರದ ಆದೇಶ ಸಂಖ್ಯೆ: ನಅಇ 06 ಎಂ.ಎನ್.ವೈ 2021, ದಿನಾಂಕ: 29–04–2021 ರ ಕ್ರ.ಸಂ 240 ಮತ್ತು 244ರ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುತ್ತದೆ.

ಸದರಿ ಕಾಮಗಾರಿಗಳಿಗೆ ದಿನಾಂಕ: 01–09–2021 ರಂದು ದ್ವಿ–ಲಕೋಟೆ E-Procurement ಪದ್ಧತಿಯಲ್ಲಿ ರೂ.1000.00 ಲಕ್ಷಗಳಿಗೆ ಕಾಮಗಾರಿ ಟೆಂಡರ್ ಪ್ರಕಟಣೆ ಸಂಖ್ಯೆ: BBMP/EE/YNK.D/E-PMT/08/ 2021-22 dated: 30-08-2021ರಂತೆ ದ್ವಿಲಕೋಟೆ ಇ–ಪ್ರಕ್ಯೂರ್‌ಮೆಂಟ್ ಪದ್ಧತಿಯಂತೆ ರೂ.874.96 ಲಕ್ಷಗಳಿಗೆ (ಟೆಂಡರ್‌ಗಿಟ್ಟ ಮೊತ್ತ) ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ದಿನಾಂಕ: 01–10–2021 ರಂದು ತೆರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ ಮೂರು ಜನ ಬಿಡ್‌ದಾರರು ಭಾಗವಹಿಸಿದ್ದು ವಿವರ ಕೆಳಕಂಡಂತಿರುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತರು ತಿಳಿಸಿರುತ್ತಾರೆ.

. . .2/-

ಕ್ರ ಸಂ	ಕಾಮಗಾರಿಯ/ ಯೋಜನೆಯ ಹೆಸರು	ಅಂದಾಜು ಮೊತ್ತರೂ. (ಲಕ್ಷಗಳಲ್ಲಿ)	ಟೆಂಡರ್ ಗಿಟ್ಟಿ ಮೊತ್ತ ರೂ. (ಲಕ್ಷಗಳಲ್ಲಿ)	ಟೆಂಡರ್‌ನಲ್ಲಿ ಭಾಗವಹಿಸಿರುವ ಗುತ್ತಿಗೆದಾರರು	ಪರಾ
1	Restoration and Improvements of Balance roads of Chikka bettahalli, Dodda bettahalli village, Aditya nagara Phase-01 and surrounding areas in ward no-03 of Yelahanka New town Sub division PACKAGE NO-05.	1000.00	874.96	Sri A. Surya Prakash (Karthik Enterprises)	Technically Qualified
				Sri G. Humesh Kumar (Sri Sai Constructions)	Technically Qualified
				Sri J.V. Manjunatha Reddy	Technically Qualified

ಬಿಡ್‌ದಾರರಾದ 1) Sri A Surya Prakash (Karthik Enterprises 2) Sri G Humesh Kumar (Sri Sai Constructions) 3) Sri J.V. Manjunatha Reddy ರವರು ತಾಂತ್ರಿಕವಾಗಿ ಅರ್ಹತೆ ಹೊಂದಿರುವುದರಿಂದ ದಿನಾಂಕ: 21-10-2021 ರಂದು ಮಾನ್ಯ ಮುಖ್ಯ ಆಯುಕ್ತರವರ ಅಧ್ಯಕ್ಷತೆಯಲ್ಲಿರುವ ತಾಂತ್ರಿಕ ಮೌಲ್ಯಮಾಪನ ಸಮಿತಿಯು ತಾಂತ್ರಿಕ ಬಿಡ್‌ಗೆ ಅನುಮೋದನೆ ಹಾಗೂ ಆರ್ಥಿಕ ಬಿಡ್‌ನ್ನು ತೆರೆಯಲು ಅನುಮೋದನೆ ನೀಡಿರುವಂತೆ ದಿನಾಂಕ: 27-10-2021 ರಂದು ಆರ್ಥಿಕ ಬಿಡ್‌ಅನ್ನು ತೆರೆಯಲಾಗಿದ್ದು, ವಿವರ ಈ ಕೆಳಕಂಡಂತಿದೆ.

ಕ್ರ ಸಂ	ಗುತ್ತಿಗೆದಾರರ ಹೆಸರು	ಟೆಂಡರ್ ಗಿಟ್ಟಿ ಮೊತ್ತ 2018-19 ರ ಅನುಮೋದಿತ ದರಗಳಿಗೆ ಹೊಲಿಸಿದಾಗ	ಟೆಂಡರ್ ಗಿಟ್ಟಿ ಮೊತ್ತ 2-11-2021 ರ ಪರಿಷ್ಕೃತ ದರಗಳಿಗೆ ಹೊಲಿಸಿದಾಗ	ಗುತ್ತಿಗೆದಾರರು ನಮೂದಿಸಿರುವ ದರಗಳು	2018-19ನೇ ಸಾಲಿನ ಎಸ್.ಆರ್ ದರಗಳಿಗೆ ಹೋಲಿಸಿದಾಗ ಶೇಕಡವಾರು	ದಿನಾಂಕ: 2-11-2021 ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡವಾರು
01	Sri G. Humesh Kumar (Sri Sai Constructions)	8,74,96,946.91	9,27,62,465.76	9,18,27,199.41	(+) 4.95%	(-)1.00% ಎಲ್-1
02	Sri J.V. Manjunatha Reddy			9,36,74,444.03	(+) 7.06%	(+) 0.98% ಎಲ್-2
03	Sri A. Surya Prakash (Karthik Enterprises)			9,53,71,214.58	(+) 9.00%	(+) 2.81 % ಎಲ್-3

ಸದರಿ ಟೆಂಡರ್‌ನಲ್ಲಿ ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾದ Sri G. Humesh Kumar (Sri Sai Constructions) ರವರು ರೂ.9,18,27,199.41 ಗಳನ್ನು ನಮೂದಿಸಿದ್ದು, ಕರ್ನಾಟಕ ಲೋಕೋಪಯೋಗಿ ಇಲಾಖೆಯ 2018-19ನೇ ಸಾಲಿನ ದರಗಳಿಗೆ ಹೋಲಿಸಿದಾಗ ಶೇಕಡ (+)4.95% ರಷ್ಟು ಹಾಗೂ ದಿನಾಂಕ: 02-11-2021 ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡ (-)1.00% ಕಡಿಮೆಯಾಗಿರುತ್ತದೆ. ಟೆಂಡರ್

. . .3/-

ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಎಲ್-1 ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸಿದ್ದು, ವಿವರ ಈ ಕೆಳಕಂಡಂತಿರುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತರು ತಿಳಿಸಿರುತ್ತಾರೆ.

	BEFORE NEGOTIATION				AFTER NEGOTIATION		
ಕ್ರ ಸಂ.	ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು	ಗುತ್ತಿಗೆದಾರರು ನಮೂದಿಸಿರುವ ದರಗಳು	2018-19ನೇ ಸಾಲಿನ ಎಸ್.ಆರ್ ಧರಗಳಿಗೆ ಹೋಲಿಸಿದಾಗ ಶೇಕಡವಾರು	ದಿನಾಂಕ: 2-11-2021 ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡವಾರು	ದರ ಸಂದಾನದ ನಂತರ ಗುತ್ತಿಗೆದಾರರು ನಮೂದಿಸಿರುವ ಮೊತ್ತ	2018-19ನೇ ಸಾಲಿನ ಎಸ್.ಆರ್ಧರ ಗಳಿಗೆ ಹೋಲಿಸಿದಾಗ ಶೇಕಡವಾರು	ದಿನಾಂಕ: 2-11-2021 ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡವಾರು
01	Sri G. Humesh Kumar (Sri Sai Constructions)	9,18,27,199.41	(+) 4.95 %	(-)1.00%	9,17,84,297.31	(+) 4.90%	(-)1.05%

ಮೇಲ್ಕಂಡ ವಿವರಗಳಂತೆ ಎಲ್-1 ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸಿದ್ದು, ದರ ಸಂಧಾನದ ನಂತರ ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ.9,17,84,297.31 ಗಳಾಗಿದ್ದು, ಈ ಮೊತ್ತವನ್ನು ಕರ್ನಾಟಕ ಲೋಕೋಪಯೋಗಿ 2018-19ನೇ ದರಪಟ್ಟಿ ದರಗಳಿಗೆ ಹೋಲಿಸಿದಾಗ ಶೇ.4.90% ಹೆಚ್ಚುವರಿಯಾಗಿರುತ್ತದೆ. ದಿನಾಂಕ: 02-11-2021 ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡ (-) 1.05% ರಷ್ಟು ಕಡಿಮೆ ಇರುತ್ತದೆ.

ದಿನಾಂಕ: 06-11-2021 ರಂದು ನಡೆದ ಆರ್ಥಿಕ ಮೌಲ್ಯಮಾಪನ ಮತ್ತು ದರ ಸಂದಾನ ಸಮಿತಿ ಸಭೆಯಲ್ಲಿ ರೂ.9,17,84,297.31 ಗಳಿಗೆ ಟೆಂಡರ್ ಅನುಮೋದಿಸಲು ಶಿಫಾರಸ್ಸು ಮಾಡಲಾಗಿರುತ್ತದೆ. ಆದುದರಿಂದ ಮೇಲ್ಕಂಡ ಕಾಮಗಾರಿಯನ್ನು ವಾರ್ಡ್ ನಂ-03ರ ವ್ಯಾಪ್ತಿಯಲ್ಲಿ ಕೈಗೊಂಡು ನಿರ್ವಹಿಸಬೇಕಾಗಿರುವುದರಿಂದ ರೂ.1000.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಕಡಿಮೆ ಮೊತ್ತದ ಬಿಡ್‌ದಾರರಾದ Sri G. Humesh Kumar (Sri Sai Constructions) ರವರ ಟೆಂಡರ್‌ನ ಮೊತ್ತ ರೂ.9,17,84,297.31 ಗಳ ಹೆಚ್ಚುವರಿ ದರಗಳಿಗೆ (+4.90%) ಟೆಂಡರ್ ಅನುಮೋದನೆ ನೀಡುವಂತೆ ಬಿಬಿಎಂಪಿ ಮುಖ್ಯ ಆಯುಕ್ತರು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿನಾಂಕ: 26.11.2021 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ಮುಂದೆ ಬಿ.ಬಿ.ಎಂ.ಪಿ. ಮುಖ್ಯ ಆಯುಕ್ತರ ದಿನಾಂಕ: 10-11-2021ರ ಪ್ರಸ್ತಾವನೆಯನ್ನು ಮಂಡಿಸಲಾಗಿದ್ದು, ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ, ವಿಷಯವನ್ನು ಚರ್ಚಿಸಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.

"ವಿವರವಾದ ಚರ್ಚೆಯ ನಂತರ Restoration and Improvements of Balance roads of Chikkabettahalli, Doddabettahalli village, Adityanagara Phase -01 and surrounding areas in ward no -03 of Yelahanka New town Sub division (PACKAGE NO-05) ಪ್ಯಾಕೇಜಿನ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ, G Humesh Kumar (Sri Sai Constructions) ರವರ ಬಿಡ್ಡನ್ನು ಟೆಂಡರ್‌ಗಿಟ್ಟ ಮೊತ್ತವಾದ ರೂ.8,74,96,946.91 ಗಳಿಗೆ ಹೋಲಿಸಿದಾಗ 1.00% ಅಧಿಕ ಅಂದರೆ ರೂ. 8,83,71,916/- ಗಳಿಗೆ ಮಿತಿಗೊಳಿಸಿ ಅನುಮೋದಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

. . .4/-

ದಿನಾಂಕ: 26-11-2021 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಿರ್ಣಯದಂತೆ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ನಅಇ 209 ಎಂಎನ್‌ವೈ 2021,
ಬೆಂಗಳೂರು, ದಿನಾಂಕ: 10-02-2022.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ 06 ಎಂಎನ್‌ವೈ 2021, ದಿನಾಂಕ: 29-04-2021 ರಲ್ಲಿ 2020-21ನೇ ಸಾಲಿನ ರಾಜ್ಯ ಆಯವ್ಯಯದ ಕಂಡಿಕೆ: 205 ರಲ್ಲಿ ಘೋಷಿಸಿರುವಂತೆ ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳ ರಸ್ತೆ ದುರಸ್ತಿ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಒಟ್ಟು ರೂ.1000.00 ಕೋಟಿಗಳ ಅಂದಾಜು ಮೊತ್ತದ ಕ್ರಿಯಾಯೋಜನೆಗೆ ಅನುಮೋದನೆ ನೀಡಿ ಆದೇಶಿಸಿದ್ದು, ಸದರಿ ಆದೇಶದ ಕ್ರಮ ಸಂಖ್ಯೆ: 240 ಮತ್ತು 244 ರಲ್ಲಿನ 02 ಕಾಮಗಾರಿಗಳನ್ನು ಒಗ್ಗೂಡಿಸಿ ಮಾಡಲಾಗಿರುವ Restoration and Improvements of Balance roads of Chikkabettahalli, Doddabettahalli village, Adityanagara Phase -01 and surrounding areas in ward no -03 of Yelahanka New town Sub division (PACKAGE NO-05)", ಪ್ಯಾಕೇಜಿನ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ, ದಿನಾಂಕ: 26-11-2021 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಿರ್ಣಯದಂತೆ, G Humesh Kumar (Sri Sai Constructions) ರವರ ಬಿಡ್ಡನ್ನು ಟೆಂಡರ್‌ಗಿಟ್ಟ ಮೊತ್ತವಾದ ರೂ.8,74,96,946.91 ಗಳಿಗೆ ಹೋಲಿಸಿದಾಗ 1.00% ಅಧಿಕ ಅಂದರೆ ರೂ.8,83,71,916.00 ಗಳಿಗೆ ಮಿತಿಗೊಳಿಸಿ (ಎಂಟು ಕೋಟಿ ಎಂಭತ್ತಮೂರು ಲಕ್ಷದ ಎಪ್ಪತ್ತೊಂದು ಸಾವಿರದ ಒಂಭೈನೂರ ಹದಿನಾರು ರೂಪಾಯಿಗಳು ಮಾತ್ರ) ಗಳಿಗೆ ಮಿತಿಗೊಳಿಸಿ ಟೆಂಡರ್‌ಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮೋದನೆಯನ್ನು ನೀಡಿದೆ.

ಷರತ್ತುಗಳು:

1. ಕಾಮಗಾರಿಗಳಿಗೆ ಅನುಮೋದನೆ ನೀಡಿರುವ ಮೊತ್ತಕ್ಕೆ ಬಿಡ್‌ದಾರರು ಒಪ್ಪದ ಪಕ್ಷದಲ್ಲಿ ಮರು ಟೆಂಡರ್ ಕರೆಯುವುದು.
2. ಮೇಲಿನ ಕಾಮಗಾರಿಗಳನ್ನು ಕೆ.ಟಿ.ಪಿ.ಪಿ. ಕಾಯ್ದೆ / ನಿಯಮಗಳು ಹಾಗೂ ಎಲ್ಲಾ ಚಾಲ್ತಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿರುವುದನ್ನು ಬಿಬಿಎಂಪಿ ಮುಖ್ಯ ಆಯುಕ್ತರು ವಿಚಿತಪಡಿಸಿಕೊಂಡು ಅನುಷ್ಠಾನಗೊಳಿಸುವುದು.
3. ಈ ಕಾಮಗಾರಿಗೆ ತಗಲುವ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 06 ಎಂಎನ್‌ವೈ 2021, ದಿನಾಂಕ: 29-04-2021ರಲ್ಲಿ ಮೀಸಲಿಟ್ಟಿರುವ ಅನುದಾನದಲ್ಲಿ ಭರಿಸುವುದು.
4. ಮೇಲಿನ ಕಾಮಗಾರಿಯನ್ನು ಸರ್ಕಾರದಿಂದ ಮಂಜೂರಾದ ಮೊತ್ತದ ಮಿತಿಯಲ್ಲಿಯೇ ಯಾವುದೇ ಪೆಚ್ಚುವರಿಯಾಗದಂತೆ ಅನುಷ್ಠಾನಗೊಳಿಸಲು ಕ್ರಮ ವಹಿಸತಕ್ಕದ್ದು ಹಾಗೂ ಹೆಚ್ಚುವರಿ ಟೆಂಡರ್ ಪ್ರೀಮಿಯಂ ಅನ್ನು ಬಿಬಿಎಂಪಿಯ ಸ್ವಂತ ಸಂಪನ್ಮೂಲದಿಂದ ಭರಿಸತಕ್ಕದ್ದು.
5. ಕರ್ನಾಟಕ ಆರ್ಥಿಕ ಸಂಹಿತೆ 1958 ಸಾಧಿಲ್ವಾರು ವೆಚ್ಚ ಕೈಪಿಡಿ ಅಧಿನಿಯಮ ಹಾಗೂ ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ಕಾಯ್ದೆ ನಿಯಮಗಳುಸಾರ ಕ್ರಮವಹಿಸತಕ್ಕದ್ದು.
6. ಸರ್ಕಾರವು ಕಾಮಗಾರಿಗಳಿಗೆ ಆಡಳಿತಾತ್ಮಕ ಮತ್ತು ಟೆಂಡರ್‌ಗಳಿಗೆ ಅನುಮೋದನೆ ನೀಡಿದ್ದಾಗ್ಯೂ ಸಹ ಕಾಮಗಾರಿಯು ಪುನರಾವರ್ತನೆ ಆಗದಂತೆ ನೋಡಿಕೊಳ್ಳತಕ್ಕದ್ದು. ಅನುಮೋದನೆ ಗೊಂಡಿರುವ ಕಾಮಗಾರಿಯನ್ನಲ್ಲದೆ ಯಾವುದೇ ಕಾರಣಕ್ಕೆ ಬೇರೆ ಕಾಮಗಾರಿಗಳನ್ನು ಕೈಗೊಳ್ಳಬಾರದು.
7. ಮೇಲಿನ ಕಾಮಗಾರಿಗೆ 3rd Party Quality Monitors ಗಳನ್ನು ನೇಮಿಸಿಕೊಂಡು ಉತ್ತಮ ಗುಣಮಟ್ಟದಿಂದ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸತಕ್ಕದ್ದು.
8. ದಿನಾಂಕ: 26-11-2021 ರ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಯಲ್ಲಿ ನಮೂದಿಸಿರುವ ಎಲ್ಲಾ ಷರತ್ತು ಹಾಗೂ ನಿಬಂಧನೆಗಳನ್ನು ತಪ್ಪದೆ ಪಾಲಿಸತಕ್ಕದ್ದು.

. . .5/-

9. ಸದರಿ ಬಿಡ್ದುದಾರರು ಅಥವಾ ಇನ್ಯಾವುದೇ ಹಂತದಲ್ಲಿ ತಪ್ಪು ಮಾಹಿತಿ / ದಾಖಲೆ ನೀಡಿರುವುದು ಕಂಡುಬಂದಲ್ಲಿ ಟೆಂಡರ್‌ಅನ್ನು ರದ್ದುಪಡಿಸಲು ಬಿಬಿಎಂಪಿ ಮುಖ್ಯ ಆಯುಕ್ತರು ನಿಯಮಾನುಸಾರ ಕ್ರಮ ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಕ್ಷ್ಮೀಸಾಗರ್ ಎಸ್.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ದಿನಾಂಕ: 10/02

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
5. ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 3 ಮತ್ತು 9), ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿ-3 ರವರ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ.
11. ಕಾರ್ಯಪಾಲಕ ಅಭಿಯಂತರರು (ತಾಂತ್ರಿಕ ಕೋಶ), ನಗರಾಭಿವೃದ್ಧಿ ಇಲಾಖೆ.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.